SRI B. SUBBAYYA SHETTY.—I will agree with you. I will definitely take this question with the University.

SRI A. LAKSHMISAGAR.—Another point is that some weightage must be given to students coming from rural areas. There are certain advantages so far as students coming from urban areas as against the rural areas. It must receive proper attention by the Government.

SRI B.SUBBAYYA SHETTY.—About the question which he has asked, I also know the difficulties of students coming from rural areas, because I myself come from rural area. But I would like to know whether under the law we could do that distinction. If you could say that it could be done, definitely we can think of it.

SRI A. LAKSHMISAGAR.—I want to tall you one instance. So, far as admission to the Agricultural Science College is concerned, there is one condition *viz*; the student must be the son of an agriculturist. This question must also be considered on the same line. It will not be in conflict with Art. 14 of the Constitution. That may be examined.

ಶ್ರೀ ಬಿ. ವಿ. ರಾಮಚಂದ್ರರೆಡ್ಡಿ.—ಸುಮಾರು ೩೦೦ ಜನ ಹುಡುಗರಿಗೆ ಪಾಠ ಹೇಳಿ ಕೊಡುವಂಥಾ ಅಧ್ಯಾಪಕ ವರ್ಗ ಈ ವಿಶ್ವವಿದ್ಯಾನಿಲಯದಲ್ಲಿದೆ. ೧೯೭೪ನೇ ಇಸವಿಯಲ್ಲಿ ಈ ಒಂದು ಅಧ್ಯಾಪಕ ವರ್ಗ ಏನು ಇತ್ತು ಅದರಲ್ಲಿ ಯಾರನ್ನೂ ಕೂಡ ಇದುವರೆಗೆ ರಿಟ್ರೆಂಚ್ ಮಾಡಿಲ್ಲಾ ಆದುದರಿಂದ ಹೆಚ್ಚು ಸೀಟುಗಳನ್ನು ತೆಗೆದುಕೊಂಡು ಅವರನ್ನು ನೀವು ಏತಕ್ಕೆ ಉಪಯೋಗ ಮಾಡಿಕೊಳ್ಳಬಾರದು? ಸೀಟು ಕಡಿಮೆ ಮಾಡಿದರೆ ಅವರನ್ನು ತೆಗೆಯುವ ಪರಿಸ್ಥಿತಿ ಬರುತ್ತದೆ. ಹೆಚ್ಚಿನ ಸ್ಟ್ರೆಂಥ್ ಇಟ್ಟುಕೊಂಡು ಅವರಿಗೆ ಸಂಬಳ ಕೊಡುತ್ತಿದ್ದೀರಲ್ಲಾ ಆದಕ್ಕೆ ನಾನು ಹೇಳುವುದು ಏನೆಂದರೆ ಸೀಟುಗಳನ್ನು ಹೆಚ್ಚು ಮಾಡಿ ಆ ಅಧ್ಯಾಪಕ ವರ್ಗದವರನ್ನು ಏತಕ್ಕೆ ಉಪಯೋಗಿಸಿಕೊಳ್ಳಬಾರದು ಎಂದು ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುತ್ತೇನೆ.

SRI B. SUBBAYYA SHETTY.—We will inform the University whatever the hon. Member said.

(ii) *re: Delay in settling pension of Paurakarmikas of Bagalkot Municipalities*

ಶ್ರೀ ಪಿ. ಕೆ. ಕಳ್ಳಿಗುಡ್ಡ (ಬಾಗಲಕೋಟೆ).—ಸ್ವಾಮಿ, ೩೦೨ನೇ ನಿಯಮದ ಮೇರೆಗೆ ಬಾಗಲಕೋಟೆ ಪುರಸಭೆಯ ಪೌರ ಕಾರ್ಮಿಕರ ನಿವೃತ್ತಿ ವೇತನದ ಬೇಡಿಕೆಯನ್ನು ಇತ್ಯರ್ಥ ಮಾಡುವಲ್ಲಿ ವಿಳಂಬವಾಗಿರುವ ಬಗ್ಗೆ ಮಾನ್ಯ ಮಂತ್ರಿಗಳ ಗಮನಸೆಳೆಯ ಬಯಸುತ್ತೇನೆ.

SRI H. C. SRIKANTIAH (Minister for Municipal Administration).—KarnatakaMunicipalities(Conditions of Serviceof Officers and Servants) Rules1972 came into force with effect from 22-5-1972.According to these rules, the employees who exercise option in favour of pension are eligible for pension from the consolidated funds subject to the condition that the municipality has to pay 1/8th of sanctioned salaries of the several appointments as pension contribution.

There was some difficulty in regard to the proceduret o be followed for verification and authorisation of pension cases. and the pension cases were pending for a long time. Directions were issued in G. O. No. HMA 839 MLR 76 dated 9-2-1977 prescribing the procedure for verification and authorisation of the pension cases and the authorities. Subsequently, the Accountant General has raised some points in regard to verification of pension cases. Due to this, there was pendency of pension cases.

In the meanwhile, with a view to provide some interim relief to the retired employees, Government issued directions for payment of anticipatory pension to the extent of 75% of the probable pension out of municipal funds to those retired employees.

Again in consultation with the Officers of the Accountant General and the Controller, State Accounts Department, instructions have been issued prescribing the procedure for verification and authorisation of the pension cases of retired municipal employees in supersession of the earlier orders in G.O. No. HUD 677 MLR 77 dated 15th May 1978. Instructions have also been issued to dispose of the pending cases within three months. Now there is no difficulty to finalise most of the cases.

In Bagalkot Municipality, the employees were governed by Old Pension Rules prior to 22-5 1972. In respect of the employees of such municipalities who retired after 22-5-1972 there is some difficulty in regard to the pension contribution prior to 22-5-1972. This is being examined separately and a decision will be taken up soon. At present, the Bagalkot Municipality is paying anticipatory pension at the rate of 75% of probable pension to the retired employees.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಅಲ್ಲಿ ಇನ್ನೂ ಶೇಕಡ ೨೫ ರಷ್ಟು ಮಂದಿಗೆ ನಿವೃತ್ತಿ ವೇತನ ಸಿಕ್ಕಿಲ್ಲ. ಆವರಲ್ಲಿ ನಾಲ್ಕು ಮಂದಿ ಈಗಾಗಲೇ ಸತ್ತು ಹೋಗಿದ್ದಾರೆ. ಆದುದರಿಂದ, ಅವರಿಗೆ ಆದಷ್ಟು ಬೇಗನೆ ನಿವೃತ್ತಿ ವೇತನ ದೊರೆಯುವ ಹಾಗೆ ವ್ಯವಸ್ಥೆ ಮಾಡಲಾಗುವುದೆ ?

೩-೦೦ ಪಿ.ಎಂ.

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಆದಷ್ಟು ಜಾಗ್ರತೆ ಮಾಡಲಾಗುವುದು.

ಶ್ರೀ. ಪಿ. ಕೆ. ಕಳ್ಳಿಗುಡ್ಡ.—ಅಲ್ಲಿನ ಪೌರಕಾರ್ಮಿಕರು ಸಾಯುತ್ತಿದ್ದಾರೆ. ಅವರು ಸಾಯುವುದರೊಳಗೆ ನಿವೃತ್ತಿ ವೇತನ ದೊರೆಯುವ ಹಾಗೆ ವ್ಯವಸ್ಥೆ ಮಾಡುವಿರಾ ?

ಶ್ರೀ ಪೆಚ್. ಸಿ. ಶ್ರೀಕಂಠಯ್ಯ.—ಅವರು ಸಾಯುವುದು ಬೇಡ; ಬದುಕಿರಲಿ. ಈಗಾಗಲೇ ಬಾಗಲಕೋಟೆ ಮುನಿಸಿಪಾಲಿಟಿಯಲ್ಲಿ ಶೇಕಡ ೭೫ ರಷ್ಟು ಭಾಗಕ್ಕೆ ಕೊಡಲಾಗಿದೆ; ಇನ್ನುಳಿದಿರುವುದು ಶೇಕಡ ೨೫ ರಷ್ಟು ತಾನೆ ? ಆದನ್ನು ಶೀಘ್ರವಾಗಿ ಕೊಡಿಸಲಾಗುವುದು.

ಶ್ರೀ ಐ. ಪಿ. ಡಿ. ಸಾಲಪ್ಪ.—ಮಾನ್ಯ ಸಚಿವರು ಪೆನ್‌ಷನ್ ಕಾಂಟ್ರಿಬ್ಯೂಷನ್‌ನ್ನು ಸಂಬಂಧಪಟ್ಟ ಮುನಿಸಿಪಾಲಿಟಿಯವರು ಕೊಡಬೇಕೆಂದು ತಿಳಿಸಿದ್ದಾರೆ. ಹಾಗೆ ಎಷ್ಟು ಮುನಿಸಿಪಾಲಿಟಿಯವರು ಪೆನ್‌ಷನ್ ಕಾಂಟ್ರಿಬ್ಯೂಷನ್‌ಕೊಟ್ಟಿದ್ದಾರೆ ಮತ್ತು ಎಷ್ಟು ಮುನಿಸಿಪಾಲಿಟಿಯವರು ಕೊಟ್ಟಿಲ್ಲವೆಂಬುದನ್ನು ತಿಳಿಸುವುದಲ್ಲದೆ, ಆಂಟಿಸಿಪೇಟರಿ ಪೆನ್‌ಷನ್‌ನ್ನು ಯಾವ ಯಾವ ಮುನಿಸಿಪಾಲಿಟಿಯವರು ಎಷ್ಟೆಷ್ಟು

ಜನರಿಗೆ ಕೊಟ್ಟಿರುವರೆಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಏಕೆಂದರೆ, ಗ್ಯಾಚುಯಿಟಿ ಮತ್ತು ಪೆನ್‌ಷನ್‌ನ್ನಿನ ಆಂತಿಮ ಆಜ್ಞೆ ಹೊರಡುವ ವೇಳೆಗೆ ನೂರಾರು ಜನ ಸತ್ತುಹೋಗಿರುತ್ತಾರೆ. ಎ.ಜೀಸ್. ಆಫೀಸಿನವರು ಪೆನ್‌ಷನ್ ಮಂಜೂರು ಮಾಡಿದರೂ, ಅದನ್ನು ಕೊಡುವುದಕ್ಕೆ ನಮ್ಮಲ್ಲಿ ಹಣವಿಲ್ಲವೆಂದು ಮುನಿಸಿಪಾಲಿಟಿಯವರು ಹೇಳುತ್ತಿದ್ದಾರೆ. ಆದುದರಿಂದ, ಇದನ್ನು ಕೊಡುವುದು ಸರ್ಕಾರವೆ ಅಥವಾ ಮುನಿಸಿಪಾಲಿಟಿಯೇ ಎಂದು ಮಾನ್ಯ ಸಚಿವರು ತಿಳಿಸಬೇಕು.

ಚೇರ್ಮನ್.—ತಮ್ಮ ಪ್ರಸ್ತಾಪ ಮುಖ್ಯ ಪ್ರಸ್ತಾಪನೆಗೆ ಸಂಬಂಧಪಟ್ಟಿದ್ದಲ್ಲ. ಆದರೂ, ಮಾನ್ಯ ಮಂತ್ರಿಗಳ ಹತ್ತಿರ ಮಾಹಿತಿ ಇದ್ದರೆ ಹೇಳಬಹುದು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಕೆಲವು ಮುನಿಸಿಪಾಲಿಟಿಗಳ ಹಣಕಾಸಿನ ಪರಿಸ್ಥಿತಿ ಬಹಳ ತೊಂದರೆಯಲ್ಲಿದೆ. ಹಣಕಾಸಿನ ಪರಿಸ್ಥಿತಿ ಸ್ವಲ್ಪ ಉತ್ತಮವಿರುವ ಮುನಿಸಿಪಾಲಿಟಿಗಳ ಶೇಕಡ ೭೫ ಭಾಗ ಕೊಡುತ್ತಿದ್ದಾರೆ. ಯಾವ ಮುನಿಸಿಪಾಲಿಟಿಗಳು ಕೊಡುತ್ತಿಲ್ಲ, ಅವುಗಳು ಕೊಡುವ ಹಾಗೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಐ. ಪಿ. ಡಿ. ಸಾಲಪ್ಪ.—ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲದ ಮುನಿಸಿಪಾಲಿಟಿಗಳ ಪೌರ ಕಾರ್ಮಿಕರ ಪೆನ್‌ಷನ್‌ಗಳನ್ನು ಸರ್ಕಾರದವರು ಕೊಡುವುದಕ್ಕೆ ಏರ್ಪಾಡು ಮಾಡಲಾಗುವುದೇ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಆ ರೀತಿಯಲ್ಲಿ ಸರ್ಕಾರ ಯೋಚನೆ ಮಾಡಿಲ್ಲ.

*(iii) re :—Non Payment of Sugarcane price to growers in Maddur Taluk.*

† ಶ್ರೀ ಜಿ. ಮಾದೇಗೌಡ (ಕಿರಿಗಾವಲ್).—ಮಾನ್ಯ ಅಧ್ಯಕ್ಷರೇ, ನಾನು ಮದ್ದೂರು ತಾಲ್ಲೂಕಿನ ಸಕ್ಕರೆ ಕಾರ್ಖಾನೆ ಬಗ್ಗೆ ಪ್ರಸ್ತಾವನೆಯನ್ನು ಕಳುಹಿಸಿದ್ದರೆ, ವಿಧಾನ ಮಂಡಲದ ಕಾರ್ಯಾಲಯದವರು ಅದನ್ನು ಮಂಡ್ಯ ತಾಲ್ಲೂಕು ಸಕ್ಕರೆ ಕಾರ್ಖಾನೆ ಬಗ್ಗೆ ಎಂದು ಇದರಲ್ಲಿ ಮುದ್ರಿಸಿದ್ದಾರೆ. ಈಗ ನಾನು ಪ್ರಸ್ತಾಪ ಮಾಡಬೇಕೆಂದಿರುವುದು ಮದ್ದೂರು ತಾಲ್ಲೂಕಿನಲ್ಲಿರುವ ಕಾಳಮುದ್ದನ ದೊಡ್ಡಿ ಸಕ್ಕರೆ ಕಾರ್ಖಾನೆ ವಿಚಾರ; ಅದು ಮಾನ್ಯ ಅಜೀಜ್ ಸೇಠ್ ಅವರ ಸ್ನೇಹಿತರ ಖಾಸಗಿ ಕಾರ್ಖಾನೆ.

ಶ್ರೀ ಅಜೀಜ್ ಸೇಠ್ —ನಾನು ಕೈಗಾರಿಕಾ ಸಚಿವನಾಗಿ ಮೂರು ತಿಂಗಳಾಯಿತು; ನನಗೆ ಅವರು ಹಳೆಯ ಸ್ನೇಹಿತರು. ಈಗ ತಮಗೆ ಮಂಡ್ಯ ತಾಲ್ಲೂಕಿನ ಕಾರ್ಖಾನೆ ಬಗ್ಗೆ ವಿವರ ಬೇಕಾದರೆ, ಆದಕ್ಕೆ ಉತ್ತರ ನನ್ನದೊಂದು ಜೇಬಿನಲ್ಲಿದೆ; ಮದ್ದೂರು ತಾಲ್ಲೂಕಿನ ಬಗ್ಗೆ ವಿವರ ಬೇಕಾದರೆ, ಅದಕ್ಕೆ ಉತ್ತರ ಇನ್ನೊಂದು ಜೇಬಿನಲ್ಲಿದೆ! ಇಡೀ ರಾಜ್ಯದ ಕಾರ್ಖಾನೆಗಳ ಬಗ್ಗೆ ಬೇಕಾದರೂ ನಿಮಗೆ ವಿವರ ಕೊಡಿಸುತ್ತೇನೆ!

ಶ್ರೀ ಜಿ. ಮಾದೇಗೌಡ.—ನಾನು ಕೇಳದೆ ಇರುವುದಕ್ಕೆಲ್ಲ ವಿವರ ಕೊಡುವುದಕ್ಕೆ ಹೋಗಬೇಡಿ; ನಾನು ಕೇಳಿದ್ದಕ್ಕೆ ಮಾತ್ರ ಕೊಡಿ. ನಮ್ಮ ತಾಲ್ಲೂಕಿನಲ್ಲೊಂದು ಖಾಸಗಿ ಸಕ್ಕರೆ ಕಾರ್ಖಾನೆ ಇದೆ. ಅಲ್ಲಿಗೆ ನಮ್ಮ ಭಾಗದ ರೈತರು ಕಬ್ಬನ್ನು ಸಾಗಿಸುತ್ತಾರೆ. ಸಾಮಾನ್ಯವಾಗಿ ಕಬ್ಬನ್ನು ಸಾಗಿಸಿದ ೧೫–೨೦ ದಿವಸಗಳಲ್ಲಿ. ಆ ಕಬ್ಬಿನ ದರವನ್ನು ಕೊಡುವ ಪದ್ಧತಿ ಎಲ್ಲ ಸಕ್ಕರೆ ಕಾರ್ಖಾನೆಗಳಲ್ಲಿದೆ. ಆದರೆ, ಕಾಳ ಮುದ್ದನ ದೊಡ್ಡಿಯ ಸಕ್ಕರೆ ಕಾರ್ಖಾನೆಗೆ ಅಲ್ಲಿನ ರೈತರು ಕಬ್ಬನ್ನು ಸಾಗಿಸಿ ಆರು ತಿಂಗಳಾದರೂ ಅವರಿಗೆ ಹಣ ಸಂದಾಯವಾಗಿಲ್ಲ. ಇದರಿಂದಾಗಿ ಕಬ್ಬನ್ನು ನೆಡುವುದಕ್ಕೆ, ಗೊಬ್ಬರ ಕೊಂಡುಕೊಳ್ಳುವುದಕ್ಕೆ ಬ್ಯಾಂಕ್‌ನವರು ಕೊಟ್ಟಿದ್ದ ಸಾಲದ ಮರುಪಾವತಿಯೂ ಆರು ತಿಂಗಳು ಮುಂದಕ್ಕೆ ಹೋಗುತ್ತದೆ; ಮತ್ತು ಅದಕ್ಕೆ ತಗಲುವ ಬಡ್ಡಿಯನ್ನೂ ಸಹ ರೈತ ಕೊಡಬೇಕಾಗುತ್ತದೆ. ಸಾಲ ತೀರಿಸುವುದು, ಕಂದಾಯ ಕಟ್ಟುವುದು, ಹಾಗೂ ಮನೆಯ ಕೆಲಸಕಾರ್ಯಗಳಿಗೆ ರೈತ ಇದೇ ದುಡ್ಡನ್ನು ಅವಲಂಬಿಸಿರುತ್ತಾನೆ. ಈ ಹಣ ಅವರಿಗೆ ಸರಿಯಾಗಿ ಬರದೆ ಅವರು ಕಿರುಕುಳಕ್ಕೊಳಗಾಗಿದ್ದಾರೆ. ಆದುದರಿಂದ, ಕಬ್ಬು ಸಾಗಿಸಿದ ೧೫–೨೦ ದಿವಸದೊಳಗೆ ಹಣ ಕೊಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಸಕ್ಕರೆ ಕಾರ್ಖಾನೆಯವರು ಕಾಲಕ್ಕೆ ಸರಿಯಾಗಿ ಹಣ ಕೊಡದೆ ಹೋದರೆ, ಬ್ಯಾಂಕಿನಿಂದ ತಂದ ಸಾಲದ ಹಣಕ್ಕೆ ಬಡ್ಡಿ ಕೊಡಬೇಕಾಗುತ್ತದೆ ಎಂದು ಮಾನ್ಯ ಸ್ನೇಹಿತರು ಹೇಳಿದರು. ಆದುದರಿಂದ, ತಡಮಾಡಿ ಹಣ ಕೊಡುವ ಕಾರ್ಖಾನೆಯವರು, ತಾವು ತಡ ಮಾಡಿದ ಕಾಲಕ್ಕೆ ಬೀಳುವ ಬಡ್ಡಿಯನ್ನು ರೈತರ ಬದಲು ಕೊಡುವುದಕ್ಕೆ ಏರ್ಪಾಡು ಮಾಡಲಾಗುವುದೆ ?